ಆದ್ರೆ ಈ ರೀತಿಯ ಸಲ್ಲದ ಆರೋಪ ನನ್ನ ಮಗಳ ಮೇಲೆ ಹೊರೆಸಬೇಡ. ಅದನ್ನು ಸಹಿಸುವಷ್ಟು, ನಮ್ಮ ಗುಂಡಿಗೆ ಗಟ್ಟಿಯಾಗಿಲ್ಲ. ನಿನ್ನ ಫೋನ್ ಕರೆಗೆ ಕಾಯ್ತೀನಿ... ಏನು ಬೇಕು... ಎಷ್ಟು ಬೇಕು ಹೇಳು... ಸರೀನಾ... ನನ್ನ ಸರ್ವಸ್ವವನ್ನು ಮಾರಿಯಾದರೂ ಕೊಡ್ತೀನಿ. ಆದರೆ ಇಂಥ ನೀಚತನ ಸಹಿಸಲ್ಲ...' ಅವನಿಗೆ ಬೆನ್ನು ಮಾಡಿ ಮುಂಬಾಗಿಲ ಕಡೆಗೆ ನಡೆದರು.

ಪ್ರದೀಪ ದಂಗಾಗಿ, 'ಮಾವ... ನೀವು ನನ್ನ ತಪ್ಪು ತಿಳ್ಕೊಂಡಿದ್ದೀರಾ...' ಎಂದ.

'ಇಲ್ಲಪ್ಪಾ... ಇಷ್ಟು ದಿನ ತಪ್ಪು ತಿಳ್ಕೊಂಡಿದ್ದೆ. ನೀನು ಸುಭಗ, ಸಂಭಾವಿತ ಅಂದ್ಕೊಂಡಿದ್ದೆ. ಆದ್ರೆ ಈಗ ಸರಿಯಾಗಿ ನಿನ್ನ ಅರ್ಥ ಮಾಡಿಕೊಂಡಿದ್ದೀನಿ. ನನ್ನ ಮಗ್ಳಿಗೆ ಇನ್ನೂ ನಿನ್ನ ಸಂಗತಿ ಗೊತ್ತಿಲ್ಲ. ಅವ್ಳಿಗೆ ತಿಳಿಯೋದೂ ಬೇಡ. ಅವ್ಳ ದೃಷ್ಟೀಲಿ ನೀನು ಸಣ್ಣವನಾಗೋದು ನನ್ಗೆ ಇಷ್ಟವಿಲ್ಲ. ನನ್ನಪ್ಪ ನನ್ಗೆ ಇಂಥ ಗಂಡನ್ನ ತಂದು ಕಟ್ಟಿದ ಅಂತ ಅವ್ಳಿಗೆ ವ್ಯಥೆ ಕಾಡಬಾರದು. ನಿನ್ನ ಡಿಮ್ಯಾಂಡ್ಸ್ ಏನು ಎಂದು ಫೋನ್ ಮಾಡಿ ತಿಳಿಸು... ಜೀವ ಕೊಟ್ಟಾದರೂ ಅದನ್ನ ಈಡೇರಿಸ್ತೀನಿ...'

ಪ್ರದೀಪ ಗರಬಡಿದವನಂತೆ ನಿಂತು ಬಿಟ್ಟ. ನಿವೇದಿತಾ ಬಟ್ಟೆಬರೆಗಳೊಂದಿಗೆ ಹೊರಬಂದಳು. ನಿಧಿ ಆಗಲೇ ಹೊಟ್ಟೆ ತುಂಬಿದ್ದರಿಂದ ನಿದ್ದೆ ಹೋಗಿದ್ದಳು.

'ಹೋಗಿ ಬರ್ತೀನಿ...' ಎಂದು ಹೇಳಿದಳು. ಕೇಶವರು ಅದನ್ನೂ ಮಾಡಲಿಲ್ಲ. ತಮಗೆ ಸಂಬಂಧಿಸಿಯೇ ಇಲ್ಲವೆನ್ನುವಂತೆ ಗಂಭೀರವದನರಾಗಿ ಅಲ್ಲಿಂದ ಹೊರ ನಡೆದರು. ಪ್ರದೀಪನದ್ದೇ ಕಾರಿನಲ್ಲಿ ಎಲ್ಲರೂ ಕುಳಿತು ಅಲ್ಲಿಂದ ನಿರ್ಗಮಿಸಿದಾಗ ಮೈಯ ಶಕ್ತಿಯೆಲ್ಲಾ ಸೋರಿ ಹೋದವನಂತೆ ಬಾಗಿಲಿಗೊರಗಿ ನಿಂತುಬಿಟ್ಟ ಪ್ರದೀಪ.

* * *

ಮನೆಗೆ ಹಿಂತಿರುಗಿದ ಬಳಿಕ, ಕೇಶವರಿಗಾಗಲೀ, ವೀಣಾರಿಗಾಗಲಿ ಮಗಳ ಬಳಿ, ಪ್ರದೀಪ ಮಾಡಿದ ಆಪಾದನೆಯ ಕುರಿತು ಪ್ರಶ್ನಿಸುವ ಸಾಹಸವೇ ಮಾಡಲಾಗಲಿಲ್ಲ. ಸಹಜವಾಗಿ ಬೆರೆತು ಒಡನಾಡಿದ ಮಗಳ ಮುಖದ ಮೇಲೆ ಅಂಥ ಕುರೂಪ ವರ್ತನೆಯ ಯಾವೊಂದು ಸಣ್ಣ ಗೆರೆಯೂ ಅವರಿಗೆ ಗೋಚರಿಸಲಿಲ್ಲ. ಹುಡುಕುವ ಪ್ರಯತ್ನವನ್ನೂ ಅವರು ಮಾಡಲಿಲ್ಲ. ಏಕೆಂದರೆ ಹೆತ್ತ ಮಗಳ ಬಗ್ಗೆ ಅವರಿಗೆ ಅಷ್ಟೊಂದು ಅಪಾರ ನಂಬಿಕೆ ಇತ್ತು. ಪ್ರದೀಪನ ಬಗ್ಗೆ ಅವರಿಗಿದ್ದ ಅಪಾರ ಗೌರವ–ಅಭಿಮಾನ ಅವರೆದೆಯಲ್ಲಿ ಮಣ್ಣುಪಾಲಾಗಿತ್ತು. ಅವನ ಆ ಆರೋಪದ ಹಿಂದೆ ಯಾವುದೋ ಬಲವಾದ ಪಿತೂರಿ ಇದೆ ಎಂದು ಅವರ ಮನಸ್ಸು ಒತ್ತಿ ಹೇಳುತ್ತಿತ್ತು.

ಸುತ್ತು ಬಳಸಿ ಮಗಳ ಮನಸ್ಸಿಗೆ ಗಾಸಿಯಾಗದಂತೆ ಸಹಜ ಕುಶಲೋಪರಿಯ ಧಾಟಿಯಲ್ಲಿ ನಿವೇದಿತಾಳನ್ನು ವಿಚಾರಿಸಿದ್ದರು, 'ಮತ್ತೆ ಏನು ಸಮಾಚಾರ ನಿವೀ? ಮತ್ತೆ ಏನು ಹೇಳ್ತಾನೆ ಪ್ರದೀಪ?' ವೀಣಾ ಕೂಡಾ ತಮ್ಮ ಕೆಲಸಗಳಿಂದ ಬಿಡುಗಡೆ ಹೊಂದಿ ಮಗಳ ಪಕ್ಕ



ಬಂದು ಕುಳಿತುಕೊಂಡರು. ನಿಧಿ ನಿದ್ದೆ ಹೋಗಿದ್ದಳು. ತಂದೆಯ ಮನಸ್ಸಿನ ತುಮುಲದ ಸುಳಿವಿರದ ನಿವೇದಿತಾ ಸಹಜವಾಗಿ, 'ಅವ್ರಿಗೇನು ಪಪ್ಪ...? ಕೆಲಸ, ಟೂರ್ ಅಂತ ಆರಾಮಾಗಿದ್ದಾರೆ. ಈಗೇನೋ ಸ್ವಲ್ಪ ಕೆಲಸದ ಒತ್ತಡ ಜಾಸ್ತಿ ಇದೆ ಅನ್ಸುತ್ತೆ... ನನ್ನತ್ರ ಅದೆಲ್ಲಾ ಹೇಳಿಕೊಳ್ಳುವುದೇ ಇಲ್ಲ. ನಾನೂ ತಲೆ ಹಾಕಲ್ಲ...'

'ಏನು ಒತ್ತಡವಂತೆ?'

'ವ್ಯವಹಾರ ಅಂದಮೇಲೆ ಹಣದ ಅಡಚಣೆಗಳು ಇದ್ದೇ ಇರುತ್ತವಲ್ವಾ...? ಯಾರಿಗೋ ಇವ್ರು ಕೊಟ್ಟ ಚೆಕ್ ಬೌನ್ಸ್ ಆಗಿದೆಯಂತೆ... ಅವ್ರು ಕೇಸ್ ಹಾಕ್ತೀನಿ ಅಂತ ಕೂತಿದ್ರು... ಇವ್ರು ಫೋನ್‌ನಲ್ಲಿ ಮಾತನಾಡುವಾಗ ಕೇಳಿಸಿಕೊಂಡೆ ಅಷ್ಟೇ... ಮುಂದೆ ಏನಾಯಿತೆಂದು ತಿಳೀಲಿಲ್ಲ' ಕೇಶವರು ಅರ್ಥಗರ್ಭಿತವಾಗಿ ಪತ್ನಿಯ ಮುಖ ದಿಟ್ಟಿಸಿದರು. ಅವರಿಗಾಗಲೇ ಎಲ್ಲಾ ಮನದಟ್ಟು ಆದಂತಿತ್ತು.

'ನಿನ್ನ ಜೊತೆ ಹೇಗಿದ್ದಾನೆ? ನಿನ್ನ ಚೆನ್ನಾಗಿ ನೋಡ್ಕೋತಾನೆ ತಾನೇ?' ಒಳಗಿನ ಆತಂಕದಿಂದ ವೀಣಾರ ಬಾಯಿಂದ ತುಟಿ ಮೀರಿ ಬಂದಿತ್ತು ಪ್ರಶ್ನೆ. ಕೇಶವರು ಮಗಳ ಮುಖವನ್ನೇ ಪರೀಕ್ಷಾತ್ಮಕವಾಗಿ ದಿಟ್ಟಿಸಿದರು.

ತಾಯಿಯ ಪ್ರಶ್ನೆ ವಿಚಿತ್ರವೆನಿಸಿ, 'ಇದೇನಮ್ಮಾ ಹೀಗೆ ಕೇಳ್ತೀಯಾ? ನನಗೇನಾಗಿದೆ? ಆ ಮನೇಲಿ ಆರಾಮಾಗಿದ್ದೀನಿ. ನೀನೇ ನೋಡಿದ್ದೀಯಲ್ಲಾ... ಹೇಳೋರು ಕೇಳೋರು ಯಾರೂ ಇಲ್ಲ ನನ್ಗೆ. ಇವ್ರು ನನ್ನ ಕಣ್ರೆಪ್ಪೇಲಿ ಇಟ್ಕೊಂಡು ಕಾಯೋ ಥರ ನೋಡ್ಕೋತಾರೆ. ಅವ್ರಿಗೆ ಹೆಣ್ಣುಮಗು ಬೇಕು ಅಂತ ತುಂಬಾ ಆಸೆ ಇತ್ತು. ಈಗಂತೂ ನಮ್ಮ ಮನೆಗೆ ಈ ಪುಟ್ಟ ನಿಧಿ ಬಂದು ಅವ್ರಿಗೆ ನಿಧಿನೇ ಸಿಕ್ಕಿದಂತಾಗಿದೆ...'

ಹಾಗಾದರೆ ತನ್ನ ಆಲೋಚನಾಧಾಟಿ ತಪ್ಪೇ... ಏನಿದೆ ಪ್ರದೀಪನ ಮನಸ್ಸಲ್ಲಿ? ವ್ಯವಹಾರದಲ್ಲಿ ನಷ್ಟ ಅನುಭವಿಸುತಿದ್ದಾನೆಯೇ? ತಾನು ನಿವೇದಿತಾಳನ್ನು ಕರೆ ತಂದು ಒಂದು ದಿನವಾಯಿತು... ಅವನ ಫೋನ್ ಕರೆಯೂ ಇಲ್ಲ. ಆತ ಹಣಕ್ಕೆ ಬೇಡಿಕೆಯೂ ಇಟ್ಟಿಲ್ಲ...'

'ನಿವೀ... ನಿನ್ನ ಗಂಡಂಗೆ ಫೋನ್ ಮಾಡಿದ್ಯೇನಮ್ಮಾ?' ಎಂದು ವಿಚಾರಿಸಿದರು.

'ಹ್ಞೂಂ ಪಪ್ಪ... ಅವ್ರು ನನ್ನ ಕಾಲ್ ರಿಸೀವ್ ಮಾಡಿಲ್ಲ. ವಾಟ್ಸಾಪ್ ಮೆಸೇಜ್ ಕೂಡಾ ನೋಡಿಲ್ಲ... ಏನು ವಿಷಯ ಅಂತ ತಿಳೀತಿಲ್ಲ. ಕೆಲಸದ ಒತ್ತಡ ಇರಬೇಕು. ದಿನಾ ಮನೇಗೆ ಹತ್ತು ಸಲ ಕರೆ ಮಾಡಿ ನಿಧಿ ಏನು ಮಾಡ್ತಾಳೆ ಅಂತ ವಿಚಾರಿಸ್ತಾರೆ... ಇಲ್ಲಿಗೆ ಬಂದ್ಮೇಲೆ ಒಂದು ಕರೆನೂ ಮಾಡಿಲ್ಲ' ನಿವೇದಿತಾಳ ಮುಖ ಬಾಡಿತು. ಅವಳ ಮನದಲ್ಲೂ ಈಗ ಪ್ರಶ್ನೆಗಳ ಸುಳಿ ಸುತ್ತಲಾರಂಭಿಸಿತ್ತು. ಹೆತ್ತವರನ್ನು ತನ್ನ ಅಪ್ರಸ್ತುತಿಯಲ್ಲಿ ಪತಿ ಮಾತನಾಡಿಸಿದ್ದು ನೆನೆದು ನಿವೇದಿತಾಳಿಗೂ ಈಗ ಅನುಮಾನ ಹುಟ್ಟಲಾರಂಭಿಸಿತ್ತು.

'ಅಪ್ಪಾ... ಎಲ್ಲಾ ಸರಿಯಾಗಿದೆ ತಾನೇ? ಇವ್ರು ನಿಮ್ಮನ್ನು ಕರೆದು ಏನು ಮಾತನಾಡಿದ್ರು? ಯಾಕೆ ನನ್ನ ಇಲ್ಲಿಗೆ ಕಳಿಸಿದ್ದು ಅವ್ರು? ಅಮ್ಮ ಹುಷಾರಿಲ್ಲ ಅಂತ ಕರೆ ತಂದ್ರಲ್ವಾ... ಅಮ್ಮ ಸೌಖ್ಯವಾಗೇ ಇದ್ದಾರೆ... ಏನು ನಡೀತಾ ಇದೆ. ನೀವು ನನ್ನತ್ರ ಏನು ಮುಚ್ಚಿಡುತ್ತಿಲ್ಲಾ ತಾನೇ?'

ನಿವೇದಿತಾಳ ಏಕಾಏಕಿ ಪ್ರಶ್ನೆಗಳಿಗೆ ಕೇಶವರು ತಬ್ಬಿಬ್ಬಾದರು.

'ಇಲ್ಲ ನಿವೀ... ಎಲ್ಲಾ ಸರಿಯಾಗೇ ಇದೆ. ಮನಸ್ಸು ಕೆಡಿಸ್ಕೋಬೇಡ' ಎಂದು ಬಾರದ ನಗೆ ನಕ್ಕು ಅವಳ ಮುಂದೆ ಕುಳಿತಿರಲಾಗದೇ ಎದ್ದು ನಡೆದರು. ಆದರೂ ತಂದೆ ತನ್ನ ಸಮಾಧಾನಕ್ಕೆ ಆ ನುಡಿಗಳನ್ನಾಡುತ್ತಿದ್ದಾರೆ ಎಂದು ನಿವೇದಿತಾಳಿಗೆ ದಿಟವಾಗಿತ್ತು. ಮನದಲ್ಲಿ ಮೂಡಿದ ಪ್ರಶ್ನೆಗಳಿಗೆ ಸಮಾಧಾನ ಬೇಕಿತ್ತು. ತಡೆಯಲಾರದೇ ಪ್ರದೀಪನ ಮೊಬೈಲ್‌ಗೆ ಮತ್ತೆ ಕರೆ ಮಾಡಿದಳು. ಸ್ವಿಚ್ಡ್ ಆಫ್ ಸಂದೇಶ ಬರುತ್ತಿತ್ತು. ಮಗಳ ಎದುರಿನಿಂದ ಎದ್ದು ಬಂದಿದ್ದ ಕೇಶವರು ಕೂಡ ಅಳಿಯನಿಗೆ ಕರೆ ಮಾಡಿದರೆ ಅವರಿಗೂ ದೊರೆತದ್ದು ಅದೇ ಉತ್ತರ. ಆಫೀಸಿನ ಲ್ಯಾಂಡ್ ಲೈನ್‌ಗೆ ಕರೆ ಮಾಡಿ ರಿಸೆಪ್ಷನ್‌ನಲ್ಲಿ ವಿಚಾರಿಸಿದರು.

'ನಮ್ಗೆ ಯಾವ ಮಾಹಿತಿಯೂ ಇಲ್ಲ ಸರ್... ಬಾಸ್ ಆಫೀಸಿಗೇ ಬಂದಿಲ್ಲ' ಎನ್ನುವ ಉತ್ತರ ಬಂದಿತು. ಮನೆಯ ನಂಬರ್‌ಗೆ ಕರೆ ಮಾಡಿದರೆ ಅಲ್ಲಿದ್ದ ಕೆಲಸದವಳು, 'ಸಾರ್ ಮನೇಗೆ ಬಂದಿಲ್ಲ ರಾತ್ರಿ...' ಎನ್ನುವ ಉತ್ತರ ಕೇಳಿದ ಬಳಿಕವಂತೂ ಕೇಶವರ ಹೃದಯ ಹೊಡೆದುಕೊಳ್ಳಲಾರಂಭಿಸಿತ್ತು. 'ನಿವೇದಿತಾಳನ್ನು ತಮ್ಮೊಂದಿಗೆ ಇತ್ತ ಕಳಿಸಿ ಪ್ರದೀಪ ಎಲ್ಲಿಗೆ ಹೋದ? ಮನೆ–ಆಫೀಸು ಎಲ್ಲೂ ಇಲ್ಲವೆಂದರೆ?' ಏನೇನೋ ಕೆಟ್ಟ ಆಲೋಚನೆಗಳು ಅವರ ಮನದಲ್ಲಿ ಸುಳಿದಾಡಿ ಅವರ ಮನದ ನೆಮ್ಮದಿ ಕದಡಿ ಹೋಗಿತ್ತು.

(ಸಶೇಷ)